<u>ದಿನಾಂಕಃ **06-06-2022** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

<u>ಪಾಟೀ ಸವಾಲುಃ ವಾದಿಗಳ ಪರ ಶ್ರೀ ವೈ.ಹೆಚ್.ಕೆ. ವಕೀಲರಿಂದಃ</u>

ನಮ್ಮ ಮನೆಯಲ್ಲಿ ನಾನು, ನನ್ನ ಎರಡು ಮಕ್ಕಳು ಹಾಗೂ ನನ್ನ ಹೆಂಡತಿ ವಾಸವಾಗಿರುತ್ತೇವೆ. ನನ್ನ ಹೆಂಡತಿ ಪೂರ್ಣ ಹೆಸರು ಸಬಿಯಾ ಸಬಿತಾ ಉರ್ಫ ರೆಹಮತ್ ಉನ್ನಿಸಾ. ನನ್ನ ಹೆಂಡತಿಯ ಅಡ್ಡ ಹೆಸರು ಶೇತ್ ಸನ್ನದಿ. ನನಗೆ ಈ ಕೇಸಿನಲ್ಲಿ ಸಾಕ್ಷಿ ಹೇಳಲು ನ್ಯಾಯಾಲಯದಿಂದ ನೋಟಿಸು ಬಂದಿತು ಎಂದರೆ ನ್ಯಾಯಾಲಯದಿಂದ ನೋಟಿಸು ಬಂದಿತ್ತು ಎಂದು ಹೇಳುತ್ತಾರೆ. ನಾನು ಸಿದ್ದಲಿಂಗಪ್ಪ ಇವರ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ. ನಾನು ಹಾಲಿ ವಾಸವಾಗಿರುವ ಮನೆ ವಿಳಾಸ ಯಾವುದೇ ಎಂದರೆ ತುಂಗಭದ್ರ ಬಡಾವಣೆ, ಆಸ್ತಿ ನಂ.702/12 ಎ ದಲ್ಲಿ ವಾಸವಾಗಿದ್ದೇನೆ. ನಾನು ಈ ವಿಳಾಸದಲ್ಲಿ ವಾಸವಾಗಿದ್ದೇನೆ ಎನ್ನುವುದಕ್ಕೆ ನ್ಯಾಯಾಲಯಕ್ಕೆ ಯಾವ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಕಂದಾಯ ರಶೀದಿ ಕೊಟ್ಟಿದ್ದೇನೆ. ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ಬಿಸಿನೆಸ್ ಮಾಡುತ್ತೀರಾ ಎಂದರೆ ಇಟ್ಟಿಗಿ ವ್ಯಾಪಾರ ಮಾಡುತ್ತೇನೆ. ಅಂದರೆ ಕಮಿಷನ್ ಎಜೆಂಟ್ ಆಗಿ ಕೆಲಸ ಮಾಡುತ್ತೇನೆ ಎಂದರೆ ಸರಿ.

2. ನಾನು ಕೋಡಿಯಾಲ ಹೊಸಪೇಟೆ ಅಂಜುಮನ್ ಕಮಿಟಿಯ ಅಧ್ಯಕ್ಷರು ಎಂದರೆ ಸರಿ. ಅದೇ ರೀತಿ ನಾನು ಹರಿಹರದ ನಾಡಬಂದ್ ಶಾವಲಿ ದರ್ಗಾದ ಸದಸ್ಯರಾಗಿದ್ದೇವೆ ಎಂದರೆ ಸರಿ. ಅದೇ ರೀತಿ ನಾನು ರಾಜಕೀಯದಲ್ಲಿ ಸಹ ಮುದಾಳತ್ವ ವಹಿಸುತ್ತೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ಮತ್ತು ನನ್ನ ತಂದೆ ಇಬ್ಬರು ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು ಎಂದರೆ ಸಾಕ್ಷಿಯೂ ದೂರದ ಸಂಬಂದಿಗಳು ಎಂದಿರುತ್ತಾರೆ. ಕೊಡಿಯಾಲ ಹೊಸಪೇಟೆ ಹಳೇ ಮಸಿದಿಯ ಹತ್ತಿರ ನನಗೆ ಒಂದು ಮನೆ ಇದೆ ಎಂದರೆ ಇಲ್ಲ. ನಾನು ಆ ಮನೆಯನ್ನು ಖರೀದಿ ಮಾಡಿದ್ದು ಅಲ್ಲಿಯೇ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ನನಗೆ ಗೊತ್ತಿದೆ. ಸದರಿ ದಾವೆಯನ್ನು ವಾದಿಯೂ ಯಾರ ವಿರುದ್ದ, ಯಾವ

ಪರಿಹಾರಕ್ಕಾಗಿ ಹೂಡಿದ್ದಾರೆ ಎಂದರೆ ಸಾಕ್ಷಿಯೂ ಅವರು ಸುಳ್ಳು ಕೇಸು ಹಾಕಿದ್ದಾರೆ ಎಂದು ಹೇಳುತ್ತಾರೆ. ವಾದಿ ಮತ್ತು ವಾದಿಯ ಅಣ್ಣ ತಮ್ಮಂದಿರ ನಡುವೆ ವಾಟ್ನಿ/ಪಾಲು ವಿಭಾಗ ಆಗಿರುವ ಬಗ್ಗೆ ವೈಯಕ್ತಿಕ ಮಾಹಿತಿ ಇದೆ ಎಂದರೆ ಇದೆ.

3. ಆ ವಾಟ್ನಿ ಮಾಡುವ ಕಾಲಕ್ಕೆ ನೀವು ಹಾಜರಿದ್ದೀರಿ ಎಂದರೆ ಇಲ್ಲ. ಆ ವಾಟ್ನಿಯಲ್ಲಿ ಯಾರ ಯಾರಿಗೆ ಎಷ್ಟೆಷ್ಟು ಹಿಸ್ಸೆ ಬಂದಿರುವ ಬಗ್ಗೆ ವೈಯಕ್ತಿಕ ಮಾಹಿತಿ ಇದೆ ಎಂದರೆ ಇಲ್ಲ. ಆ ವಾಟ್ನಿಯ ಕಾಗದ ಪತ್ರಗಳನ್ನು ಯಾರು ಬರವಣಿಗೆ ಮಾಡಿದರು ಮತು ಅದರ ವಿಚಾರಗಳನ್ನು ನಾನು ಖುದ್ದಾಗಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ಆದರೆ ಪಾಲು ಆಗಿರುವ ಬಗ್ಗೆ ಗೊತ್ತಿದೆ. ವಾದಿ ಮತ್ತು ವಾದಿ ಅಣ್ಣ ತಮ್ಮಂದಿರ ನಡುವೆ ಇದುವರೆಗೂ ಯಾವುದೇ ರೀತಿಯ ಹಿಸ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.  ನಾನು 5 ನೇ ಪ್ರತಿವಾದಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿಯ ವ್ಯವಹಾರ ಯಾರ ಯಾರ ನಡುವೆ, ಯಾವ ದಿನಾಂಕ ಆಯಿತು ಎಂದರೆ ಸಾಕ್ಷಿಯೂ ಆ ಸಮಯದಲ್ಲಿ ನಾನು, ಗಣೇಶಪ್ಪ, ಚೆನ್ನಪ್ಪ, ಜಬೀ ಸಾಬ್, ಉಮ್ಮೆ ಕುಬ್ರಾ, ಮಹಮ್ಮದ್ ಗೌಸ್ ಲಕ್ನೋ ಇವರು ಇಷ್ಟು ಜನ ಸೇರಿ ವ್ಯಾಪಾರ ಮುಗಿಸಿದ್ದೇವೆ. ಆ ವ್ಯಾಪಾರವನ್ನು ಯಾರಿಗೆ ಮುಗಿಸಿದ್ದೀರಿ ಎಂದರೆ ಕಲೀಲ್ ಸಾಬ್ ಇವರಿಂದ ಸಿದ್ದಲಿಂಗಪ್ಪ ಇವರಿಗೆ ಮುಗಿದಿರುತ್ತದೆ.

4. ಆ ವ್ಯಾಪಾರವನ್ನು  ಎಷ್ಟು ಮೊತ್ತಕ್ಕೆ ಮುಗಿಸಿದ್ದೀರಿ ಎಂದರೆ 5,10,000/- ರೂಗಳಿಗೆ ಆಯಿತು ಎಂದು ಹೇಳುತ್ತಾರೆ. ಮಾತುಕತೆಯ ಸಮಯದಲ್ಲಿ ಯಾವುದಾದರೂ ಹಣ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯೂ ದಿನಾಂಕ 13-06-2014 ರಂದು ಖರೀದಿ ಪತ್ರ ಮಾಡಿ 5,10,000/- ರೂ. ಹಣ ಕೊಟ್ಟಿರುತ್ತಾರೆ. 500 ರೂ. ಗಳ ಕಟ್ಟುಗಳ 6 ಬಂಡಲ್ ಗಳು ಇದ್ದು ಹಾಗೂ 1,000/- ರೂ. 1 ಲಕ್ಷ ಬಂಡಲ್ ಗಳುಇದ್ದವು. 100 ರೂ. 10,000/- ರೂ. ಒಂದು ಬಂಡಲ್ ಇತ್ತು. ಈ ಹಣವನ್ನು ಸಿದ್ದಲಿಂಗಪ್ಪ ರವರು ಕಲೀಲ್ ಸಾಬ್ ರವರಿಗೆ ಕೊಟ್ಟಿದ್ದಾರೆ. ಆ ಖರೀದಿ ಪತ್ರದ ಮಾಹಿತಿಯನ್ನು ಬರೆಯಲು ಸಿದ್ದಲಿಂಗಪ್ಪ ರವರು ಸ್ಟಾಂಪು ವೆಂಡಾರ್ ಗೆ ಕೊಟ್ಟಿರುತ್ತಾರೆ. ಆ ಖರೀದಿ ಪತ್ರ ಯಾವಾಗ ನೊಂದಣಿ ಆಯಿತು ಎಂದರೆ ಮದ್ಯಾಹ್ನ ಊಟ ಆದ ನಂತರ 03.20 ಕ್ಕೆ ಸಬ್ ರಜಿಸ್ಟ್ರರ್ ಕಚೇರಿಯಲ್ಲಿ ನೊಂದಣಿಯಾಗಿರುತ್ತದೆ.

5. ಆ ಖರೀದಿ ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ ಎಂದರೆ ಉಮ್ಮೆ ಕುಬ್ರಾ, ಮಹಮ್ಮದ್ ಗೌಸ್ ಲಕ್ನೋ, ನಾನು ಸಹಿ ಮಾಡಿರುತ್ತೇವೆ. ನಮ್ಮನ್ನು ಬಿಟ್ಟರೆ ಬೇರೆ ಯಾರು ಸಹಿ ಮಾಡಿದ್ದಾರೆ ನನಗೆ ನೆನಪು ಆಗುತ್ತಾ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಖರೀದಿ ಪತ್ರಕ್ಕೆ ಚೆನ್ನಪ್ಪ, ಗಣೇಶಪ್ಪ ಸಹಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳು ಕ್ರಯ ಪತ್ರ ನೊಂದಣಿ ಸಮಯದಲ್ಲಿ ಸಬ್ ರಜಿಸ್ಟ್ರರ್ ಕಚೇರಿಯಲ್ಲಿ ಎಲ್ಲರೂ ಇದ್ದರು ಎಂದು ಹೇಳುತ್ತಾರೆ. ಮೇಲ್ಕಂಡ ವ್ಯಕ್ತಿಗಳನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂದರೆ ಇಲ್ಲ. ನಾನು ಮೇಲೆ ಹೇಳಿದ ರೀತಿ ಯಾವುದೇ ರೀತಿಯ ವ್ಯವಹಾರ ಹಾಗೂ ಹಣಕಾಸಿನ ಹಸ್ತಾಂತರ ನಡೆದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಆಸ್ತಿ ಯಾರಿಂದ ಯಾರಿಗೆ ಹಸ್ತಾಂತರ ಆಯಿತು ಎಂದರೆ ಸಿದ್ದಲಿಂಗಪ್ಪ ರವರು ಸಬಿಯಾ ರವರಿಗೆ ಸಬಿಯಾರವರು ಸಿದ್ದಲಿಂಗಪ್ಪ ರವರಿಗೆ ಕೊಟ್ಟಿರುತ್ತಾರೆ. ಯಾವ ಕಾರಣದಿಂದ ಅದಲು ಬದಲು ಆಯಿತು ಎಂದರೆ ಅವರ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡಿದ್ದಾರೆ.

6. ವಾದಿಯ ಹಿಸ್ಸೆಯನ್ನು ತಪ್ಪಿಸುವ ಸಲುವಾಗಿ ನಾನು ಮತ್ತು 5 ನೇ ಪ್ರತಿವಾದಿ ಹಾಗೂ ಸಿದ್ದಲಿಂಗಪ್ಪ ರವರು ಸುಳ್ಳು ಖರೀದಿ ಪತ್ರ ಹಾಗೂ ಅದಲು ಬದಲು ಪತ್ರಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದಲು ಬದಲು ಮಾಡಿಕೊಂಡಿರುವ ಸಬಿಯಾ ನನ್ನ ಹೆಂಡತಿ ಎಂದರೆ ಸರಿ. ದಾವಾ ಆಸ್ತಿಯ ಶೆಡ್ಯೂಲ್ ಕ 1 ನೇ ಆಸ್ತಿಯಲ್ಲಿ ಸುಮಾರು 50 ವರ್ಷಗಳಿಂದ ಕಬ್ಜಾದಲ್ಲಿ ವಾದಿ ಇದ್ದಾರೆ ಎಂದರೆ ಸುಳ್ಳು. ದಾವಾ ಆಸ್ತಿಯ ಶೆಡ್ಯೂಲ್ ಕ 1 ನೇ ಆಸ್ತಿ ವಾದಿಯರ ತಂದೆ ತಾಯಿ ಮತ್ತು ಅಣ್ಣ ತಮ್ಮಂದಿರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸಾಕ್ಷಿಯೂ ಮುಂದುವರೆದು 5 ನೇ ಪ್ರತಿವಾದಿಗೆ ಹಿಸ್ಸೆಗೆ ಬಂದ ಆಸ್ತಿ ಎಂದು ಹೇಳುತ್ತಾರೆ. ನಿ ಪಿ -37 ರಲ್ಲಿ ಒಟ್ಟು 13 ಪೋಟೋಗಳು ಇದ್ದು ಆ ಪೋಟೋಗಳಲ್ಲಿ ಇರುವ ಮನೆಯನ್ನು ಸಾಕ್ಷಿಗೆ ತೋರಿಸಿದ್ದು ಸದರಿ ಮನೆಯಲ್ಲಿ ವಾಸವಾಗಿದ್ದು ಇರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಸದರಿ ಪೋಟೊಗಳಲ್ಲಿನ ವ್ಯಕ್ತಿಗಳನ್ನು ತೋರಿಸಿದಾಗ ಅವರು ನನಗೆ ಪರಿಚಯವಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಪೋಟೋಗಳಲ್ಲಿರುವ ವ್ಯಕ್ತಿಗಳು ವಾದಿ ಮತ್ತು ವಾದಿಯ ಮಕ್ಕಳು ಎಂದರೆ ಅವರು ಅವರ ಗಂಡಂದಿರ ಮನೆಯಲ್ಲಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಆಸ್ತಿಯಲ್ಲಿ ವಾದಿ ಹಾಗೂ ವಾದಿಯ ಮಕ್ಕಳು ಸ್ವಾಧೀನ

ಅನುಭವದಲ್ಲಿದ್ದು ಸುಳ್ಳು ಖರೀದಿ ಪತ್ರದ ಮೇಲೆ ಸ್ವಾಧೀನ ಬಿಡಿಸಿಕೊಳ್ಳಲು ಸಾಧ್ಯವಾಗದ ಕಾರಣ ಅದಲು ಬದಲು ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿ ಇವತ್ತೂ ಸಹ ವಾದಿಯರ ಪಿತ್ರಾರ್ಜಿತ ಆಸ್ತಿ ಆಗಿದ್ದು ಇವತ್ತಿನವರೆಗೂ ಹಿಸ್ಸೆ ಆಗಿಲ್ಲದ ಕಾರಣ ಹಾಗೂ ಸದರಿ ಆಸ್ತಿಯೂ ವಾದಿಗೆ ತಂದೆಗೆ ಸೇರಿರುವ ಕಾರಣ ವಾದಿಯಾ ಈಗಲೂ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾವೆಲ್ಲರೂ ದಾಖಲೆಗಳನ್ನು ಸುಳ್ಳು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.